PW-4

**ಸಿಸಿನಂ.14253/2014**



**ದಿ.20.02.2025 ರಂದುಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ .ಕೆ.ವಿ.ಎಸ್ .ವಕೀಲರಿಂದ ಆರೋಪಿ ಪರಃ**

ನಾನು ತನಿಖಾಧಿಕಾರಿಯಾಗಿರುವುದರಿಂದ ಈ ಪ್ರಕರಣದ ದೋಷರೋಪಣಾಪಟ್ಟಿಯನ್ನು ಸಲ್ಲಿಸುವ ಕಾಲಕ್ಕೆ ತನಿಖೆಯನ್ನು ಪೂರ್ಣಗೊಳಿಸಿ ದೋಷರೋಪಣಾಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಎಫ್.ಎಸ್.ಎಲ್ ವರದಿಯನ್ನು ನಾನು ಸ್ವೀಕರಿಸಿಲ್ಲ ಮತ್ತು ಪರಿಶೀಲನೆ ಮಾಡಿಲ್ಲ. ಮೊಕದ್ದಮೇ ಸಂಖ್ಯೆಃ 123/2012 ರಲ್ಲಿ 420, 465, 468 ಮತ್ತು 471 ಗಳ ಮೇಲೆ ಪ್ರ.ವ.ವರದಿಯನ್ನು ಸಲ್ಲಿಸಿದ್ದು ಅಂತಿಮ ವರದಿಯನ್ನು ಸಲ್ಲಿಸುವ ಕಲಂ.201 ನ್ನು ಅಳವಡಿಸಲಾಗಿದೆ

ಎಂದರೆ ಸರಿ. ಯಾವುದೇ ದೋಷರೋಪಣಾ ಪಟ್ಟಿ ಸಲ್ಲಿಸಬೇಕಾದರೆ ಎಫ್.ಎಸ್.ಎಲ್ ವರದಿಯನ್ನು ಪರಿಶೀಲಿಸಿದ ನಂತರ ದೋಷರೋಪಣಾಪಟ್ಟಿ ಸಲ್ಲಿಸಬೇಕು ಎಂದರೆ ಸರಿ. ಕಲಂ.201 ಐಪಿಸಿಯನ್ನು ಯಾವ ಆಧಾರದ ಅಡಿಯಲ್ಲಿ ಸೇರಿಸಲಾಗಿದೆ ಎಂದರೆ ಸಾಕ್ಷಿ ಈ ಪ್ರಕರಣದ ಹಿಂದಿನ ತನಿಖಾಧಿಕಾರಿಯು ಮೂಲ ಕ್ರಯ ಪತ್ರ ಮತ್ತು ರೆಜ್ಯೂಲುಷನ್ ಡೀಡ್ ನ್ನು ಹಾಜರುಪಡಿಸಿ ಎಂದು ಆರೋಪಿಗೆ ಎರಡು ನೋಟಿಸ್ ಗಳನ್ನು ಕೊಟ್ಟಿರುತ್ತಾರೆ ಆದಾದ ನಂತರ ನಾನು ಆರೋಪಿಗೆ ಸದರಿ ದಾಖಲಾತಿಗಳನ್ನು ಹಾಜರುಪಡಿಸುವಂತೆ ನೋಟಿಸ್ ಕೊಟ್ಟಿರುತ್ತೇನೆ, ಆದರೆ ಆರೋಪಿ ದಾಖಲಾತಿಗಳನ್ನು ಹಾಜರುಪಡಿಸದೇ ಇರುವ ಕಾರಣ ದೋಷರೋಪಣಾ ಪಟ್ಟಿಯಲ್ಲಿ ಕಲಂ.201 ಐಪಿಸಿಯನ್ನು ಅಳವಡಿಸಲಾಗಿದೆ ಎಂದು ಹೇಳುತ್ತಾರೆ. ದಿ.26.09.2013 ರಂದು ನಮ್ಮ ಠಾಣೆಗೆ ಎಫ್.ಎಸ್.ಎಲ್ ವರದಿ ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಎಫ್.ಎಸ್.ಎಲ್ ವರದಿಯಲ್ಲಿ ವಿವಾದಿತ ಸಹಿಗಳ ಬಗ್ಗೆ ವರದಿ ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ಎಫ್.ಎಸ್.ಎಲ್ ವರದಿಯಲ್ಲಿ ಮೂಲ ರೆಜ್ಯೂಲುಷನ್ ಡೀಡ್ ಮತ್ತು ಪಾರ್ಟನರ್ ಶೀಟ್ ಡೀಡ್ ಇಲ್ಲದೇ ವರದಿಯನ್ನು ನೀಡಲು ಸಾಧ್ಯವಿಲ್ಲ ಎಂದು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎಫ್.ಎಸ್.ಎಲ್ ವರದಿ ಇಲ್ಲದೇ ಕಲಂ.201 ರೀತ್ಯಾ ದೋಷರೋಪಣಾ ಪಟ್ಟಿ ಸಲ್ಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯವಾಗುತ್ತದೆ ಎಂದು ಎಫ್.ಎಸ್.ಎಲ್ ವರದಿಯನ್ನು ನಾವು ದೋಷರೋಪಣಾ ಪಟ್ಟಿಯ ಇಂಡೆಕ್ಸ್ ನಲ್ಲಿ ಸೇರಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**

PW-**4**

**ಸಿಸಿನಂ.14253/2014**